ಅವರೊಂದು ಎನ್‌ಸೈಕ್ಲೋಪಿಡಿಯಾ. ಅಷ್ಟು ದೊಡ್ಡ ಕಲಾವಿದರು ಸಿಗೋದೇ ಅಪರೂಪ. ನಾನು ಅವರ ಹತ್ರ ಹೋದೆ. ಅವರು ಹಿಂದೆಮುಂದೆ ನೋಡಲೇ ಇಲ್ಲ. 'ಬಾರೋ ಕೂತ್ಕಳೋ, ಹಾಡೋ...' ಅಂತ ಹೇಳರು. ಜೊತೆಜೊತೆಯಲ್ಲಿ ಪಾತ್ರ ಮಾಡುತ್ತಿದ್ದೆ. ಹಾಡುಗಳನ್ನು ಚೆನ್ನಾಗಿ ಹಾಡ್ತಿದ್ದೆ.

ನಮ್ಮ ತುಮಕೂರಿನಲ್ಲಿ ಸಿ.ಎಸ್. ರಾಮನಾಥ ರಾವ್ ಅಂತ ದೊಡ್ಡ ಹಾರ್ಮೋನಿಯಂ ವಾದಕರು ಇದ್ದರು. ಮಾಸ್ಟರ್ ಹಿರಣ್ಣಯ್ಯ ಕಂಪನಿ ಸೇರಿದಂತೆ ಎಲ್ಲ ಕಂಪನಿಗಳ ನಾಟಕಗಳಲ್ಲಿ ಹಾರ್ಮೋನಿಯಂ ನುಡಿಸುತ್ತಾ ರಿಟೈರ್ಡ್ ಆಗಿ, ಶ್ರೀರಾಮನಗರದಲ್ಲಿ ನೆಲೆಸಿದ್ದರು. ನಾಟಕಗಳನ್ನು ಕಲಿಸುತ್ತಿದ್ದರು. ಅವರ ಹತ್ತಿರ ನಾಟಕ ಕಲಿಯುವುದೇ ಒಂದು ಐಭೋಗ. ಬಹಳ ಕಟ್ಟುನಿಟ್ಟು ಅವರು. ಒಂದೊಂದು ಮಟ್ಟುಗಳನ್ನು ಹಿಡಿದಿಡಿದು ಹೇಳಿ ಹೇಳಿ, ಕೂರಿಸಿ ಪದ ಹೇಳಿಕೊಡುತ್ತಿದ್ದರು. ಸಂಗೀತದ ಜ್ಞಾನ ಇಲ್ಲದಿದ್ದರೂ ಸಂಗೀತಗಾರನೇ ಹಾಡುತ್ತಿದ್ದಾನೇನೋ ಅನ್ನವ ಹಾಗೇ ಹಾಡ್ತಾ ಇದ್ದರು; ಶ್ರುತಿ ಕಲಿಸುತ್ತಿದ್ದರು.

**◆ ಬ್ರಾಹ್ಮಣ ಸಮುದಾಯಕ್ಕೆ ಮೀಸಲಾಗಿದ್ದ ಹರಿಕಥೆಯನ್ನು ಮಾಡುವುದು ಆಗ ತಳ ಸಮುದಾಯದವರಿಗೆ ಸಾಧ್ಯವಾಗುತ್ತಿರಲಿಲ್ಲ. ನೀವು ಹರಿಕಥೆ ಕೀರ್ತನೆಯನ್ನು ಕಲಿಯುವ ಸವಾಲನ್ನು ತೆಗೆದುಕೊಂಡಾಗ ಜನ ಹೇಗೆ ಸ್ವೀಕರಿಸಿದರು?**

ಎಲ್ಲಾ ಸಮುದಾಯದವರು ನನ್ನನ್ನು ಬೆಳೆಸಿದರು, ಪ್ರೋತ್ಸಾಹ ನೀಡಿದರು. ಹೆಚ್ಚಾಗಿ ಮೇಲ್ಜಾತಿಯವರೇ ಕಥೆಗೆ ಕರೆಯುತ್ತಿದ್ದರು. ವಕ್ಕಲಿಗರು, ಲಿಂಗಾಯುತರು, ಈಡಿಗ್ರು, ಇಂಗೆಲ್ಲ ಹೋಗ್ತಿದ್ದೆ. ತಳ ಸಮುದಾಯದವರ ಸುದ್ದಿಗೆ ಹೋಗಲಿಲ್ಲ ನಾನು. ನಮ್ಮೋರು ಯಾರೂ ನನ್ನ ಕರೆಯುತ್ತಿರಲಿಲ್ಲ. ಯಾಕೆಂದರೆ, ಅವರು ಹರಿಕಥೆ ಹಾಡಿಸುವಷ್ಟು ಸ್ಥಿತಿವಂತರು ಆಗಿರಲಿಲ್ಲ. ಇನ್ನೊಂದು ತಳ ಸಮುದಾಯದವರಿಗೆ ಅರೆ ತಮಟೆ ಬಿಟ್ಟು ಬೇರೆ ಗೊತ್ತಿರಲಿಲ್ಲ. ರಾತ್ರಿಯೆಲ್ಲ ನುಡಿಸ್ತಿದ್ದರು. ಬೇರೆ ವಿದ್ಯೆ ಕಲೀತಿರಲಿಲ್ಲ.

**◆ ನೀವು ಹರಿಕಥೆ ಮಾಡಲು ವಿವಿಧ ಸಮುದಾಯಗಳ ಮನೆಗಳಿಗೆ ಹೋಗುತ್ತಿದ್ದಾಗ ಕಹಿ ಘಟನೆಗಳೇನಾದರೂ ನಡೆದವಾ?**

ಹರಿಕಥೆಗಳು ನಡೆಯುತ್ತಿದ್ದುದು ಸಾರ್ವಜನಿಕ ಜಾಗಗಳಲ್ಲಿ, ಪೆಂಡಾಲ್‌ಗಳಲ್ಲಿ, ಮನೆಗಳಲ್ಲಿ ಅಲ್ಲ. ಮನೆಗಳಲ್ಲಿ ಹರಿಕಥೆ ಮಾಡುವುದಕ್ಕೆ ಆಗುವುದಿಲ್ಲ. ಮನೆಗಳಲ್ಲಿ ಯಕ್ಷಗಾನ ರೀತಿಯಲ್ಲಿ 'ರಾಜಾವಿಕ್ರಮ', 'ಶನಿಕಥೆ', 'ಸತ್ಯವ್ರತ' ಇವನ್ನೆಲ್ಲ ರಾತ್ರಿ ಹೊತ್ತು ಓದಿಸುತ್ತಿದ್ದರು. ನವಗ್ರಹ ಪೂಜೆ ಮಾಡಕ್ಕೆ ಯಾರನ್ನಾದ್ರೂ ಕರುಸ್ತಿದ್ರು. ಇದು ಯಕ್ಷಗಾನ ಪದ್ಧತಿಯ ಮಾದರಿ. ನಮ್ಮ ಹರಿಕಥಾ ಮಾದರಿ ಬೇರೆ. ಎರಡೂವರೆ ಗಂಟೆ ಕಥೆ ಅಷ್ಟೇ. ದೇವರ ಸ್ತುತಿ, ಪೀಠಿಕೆ, ಕಥಾಪ್ರವೇಶ. 'ಭೂಕೈಲಾಸ' ಕಥೆ ಮಾಡಲು ಮೊದಲು ತಾಯಿಯ ಮಹತ್ವದ ಪೀಠಿಕೆ ಮಾಡ್ತಿದ್ವಿ. 'ದಾನಶೂರ ಕರ್ಣ' ಹರಿಕಥೆ ಹೇಳುವಾಗ ದಾನದ ಕುರಿತು, ಬಭ್ರುವಾಹನನ ಧೈರ್ಯ ಅಂದರೆ ಹೇಗಿರಬೇಕು? ಹೀಗೆಲ್ಲಾ ಪೀಠಿಕೆ ಮಾಡುತ್ತಾ ಕಥೆ ಶುರು ಮಾಡುತ್ತಿದ್ದೆವು. ಹಾಡು ಹೇಳಿಕೊಂಡು, ಉಪಕಥೆಗಳನ್ನು ಹೇಳಿಕೊಂಡು ಜನರೆಲ್ಲ ಕೇಳೋ ಹಾಗೆ ಎರಡೂವರೆ ಗಂಟೆ ಕಥೆ ಮಾಡುತ್ತಿದ್ದೆವು. ಹರಿಕಥೆ ಶ್ರೋತೃಗಳನ್ನು ಹಿಡಿದಿಡುವಂಥ ಕಲೆ. ಅದರಲ್ಲಿ ಎಲ್ಲ ಮಾಧ್ಯಮಗಳು ಒಳಗೊಂಡಿವೆ. ಹರಿಕಥೆ ಸಂದರ್ಭದಲ್ಲಿ ಕೆಲವು ಕಹಿ ಪ್ರಸಂಗ ನಡೆದಿರುವುದಿದೆ. ಏನ್ ಮಾಡೋದು, ಅವುನ್ನೆಲ್ಲ ನುಂಗಿಕೊಂಡೇ ವಿದ್ಯೆ ಕಲೀತಾ ಹೋದೆ.

**◆ ನಿಮಗೆ ಹಾಡುಗಾರಿಕೆ ಯಾವಾಗ ರೂಢಿಯಾಯ್ತು?**

ಮೊದಲು ಸ್ವಲ್ಪಸ್ವಲ್ಪ ಹಾಡುತ್ತಿದ್ದೆ. ಯಾವಾಗ ರಂಗಭೂಮಿಗೆ ಹೋದೆನೋ ಪೌರಾಣಿಕ ನಾಟಕಗಳಲ್ಲಿ ಹಾಡುಗಳನ್ನು ಹಾಡಲೇಬೇಕಿತ್ತು. ಸ್ವಲ್ಪ ಸಂಗೀತದ ಜ್ಞಾನ ಬೇಕಿತ್ತು. ಆಗ ರಂಗಸ್ವಾಮಪ್ಪ ಅಂತ ನಾಯಕ ಸಮುದಾಯದವರು. ತುಮಕೂರಿನ ಶಿರಾ ಗೇಟ್‌ನಲ್ಲಿ ಇದ್ರು. ಅವರ ಹತ್ತಿರ ಸಂಗೀತ ಕಲಿಯಲು ಹೋದೆ. ಅವರು ಗುಬ್ಬಿ ಕಂಪನಿಯಲ್ಲಿ 'ಬೇಡರ ಕಣ್ಣಪ್ಪ' ನಾಟಕದಲ್ಲಿ ಪಾತ್ರ ಮಾಡುತ್ತಿದ್ದವರು. ಇಲ್ಲಿನ ಅಕ್ಕಮಹಾದೇವಿ ಸಮಾಜದಲ್ಲಿ ಸಂಗೀತ ಪಾಠ ಹೇಳಿಕೊಡುತ್ತಿದ್ದರು. ನಾನು ಹೋಗಿ, 'ಸ್ವಾಮಿ